**ದಿನಾಂಕ 16-08-2019 ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರೆದ ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ಡಾಬಾದ ಬಳಿ ದೇವಶೆಟ್ಟಹಳ್ಳಿಯ ಮಧುಕುಮಾರ್ ಕಲ್ಲಹಳ್ಳಿಯ ಕೇಶವ ಮೂರ್ತಿ, ಚಿಕ್ಕೊಂಡಹಳ್ಳಿ ವಿನಾಯಕ , ಕೃಷ್ಣಪ್ಪ , ವಿಜಯ್ ಕುಮಾರ್ ಯಶವಂತಪುರದ ನಾರಾಯಣಸ್ವಾಮಿ ನಿಂತುಕೊಂಡು ಏನೋ ಮಾತನಾಡುತ್ತಿದ್ದರೂ ಎಂದು ಪೋಲಿಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ, ನಾನು ಅಲ್ಲಿಯೇ ನಿಂತುಕೊಂಡಿದ್ದೆನು, ಸ್ವಲ್ಪ ಹೊತ್ತಿನ ನಂತರ ಕಾರಿನಲ್ಲಿ ರಮೇಶ್ , ಕವಿತಾ ಬಂದರು ಅವರ ಹಿಂದೆ ವಿಜಯಮ್ಮ ಬಂದರು ಯಾವನೋ ನಮ್ಮ ಡಾಬಾದಿಂದ ಸಾಮಾನುಗಳನ್ನು ತೆಗೆದುಕೊಂಡು ಹೋಗಿರುವವನು ನಿಮಗೊಂದು ಗತಿ ಕಾಣಿಸುತ್ತೇನೆ ಎಂದು ಡಾಬಾದಲ್ಲಿ ಇದ್ದ ಮಚ್ಚನ್ನು ತೆಗೆದುಕೊಂಡು ಅವರ ಮೇಲೆ ಹಲ್ಲೆ ಮಾಡಲು ರಮೇಶ್ ಹೋದನು ಅವರಲ್ಲಿ ಒಬ್ಬ ಕೇಶವ ಮೂರ್ತಿ ತಪ್ಪಿಸಿಕೊಂಡು ಓಡಲು ಪ್ರಯತ್ನ ಪಟ್ಟಾ ಕವಿತಾ ಅವನ ಮುಖಕ್ಕೆ ಕಾರದ ಪುಡಿ ಎರಚಿದಳು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ಅಲ್ಲಿಂದ ನ್ಯಾಯಾಲಯದ ಮುಂದಿರುವ 4, 5, 6 ನೇ ಆರೋಪಿತರು ತಪ್ಪಿಸಿಕೊಂಡು ಓಡಿ ಹೋದರು, 2ನೇ ಆರೋಪಿಯು ಅಲ್ಲಿಯೇ ಇದ್ದು ಅವನನ್ನು ಹೊಡೆಯಲು ಹೋದಾಗ ಆತ ಡಾಬಾದಲ್ಲಿ ಇದ್ದ ಒಂದು ಚಾಕುವನ್ನು ತೆಗೆದುಕೊಂಡು ಕವಿತಾಳ ಹೊಟ್ಟೆಗೆ , ರಮೇಶನ ಬೆನ್ನಿಗೆ ತಿವಿದನು, ಅವರು ರಕ್ತಸಿಕ್ತವಾಗಿ ಅಯ್ಯಯ್ಯೋ ಎಂದು ಹೊರಳಾಡುತ್ತಾ ನೆಲದ ಮೇಲೆ ಬಿದ್ದು ಹೋದರು, ಅವರ ಕೂಗಾಟದ ಶಬ್ದವನ್ನು ಕೇಳಿದ ರಸ್ತೆಯಲ್ಲಿ ತಿರುಗಾಡುತ್ತಿದ್ದವರು ಡಾಬಾದ ಕಡೆಗೆ ಹೋಗುವುದನ್ನು ಕಂಡು 2ನೇ ಆರೋಪಿ ಓಡಿ ಹೋದನು ಎಂದು ಪೋಲಿಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ, ನಂತರ ಕವಿತಾ ಬಂದಿದ್ದ ಕಾರಿನಲ್ಲಿ ರಮೇಶ್ ಮತ್ತು ಕವಿತಾಳನ್ನು ಲೋಕೇಶ್ ಹಾಗೂ ಗಜೇಂದ್ರ ಹಾಕಿಕೊಂಡು ಹೆಚ್ ಕ್ರಾಸ್‌ನಲ್ಲಿರುವ ಸೃಷ್ಟಿ ಆಸ್ಪತ್ರೆ ಕಡೆಗೆ ಕರೆದುಕೊಂಡು

ಹೋದರು ಎಂದು ಪೋಲಿಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಕವಿತಾಳವು ತದನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾಳೆ ಎಂದು ಮತ್ತು ರಮೇಶನು ಬದುಕಿ ಉಳಿದಿರುತ್ತಾನೆ ಎಂದು ತಿಳಿದು ಬಂದಿತು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರೇ ಮೃತ ಕವಿತಾಳ ಮರಣಕ್ಕೆ ಕಾರಣ ಮತ್ತು ರಮೇಶನಿಗೆ ಕೊಲೆ ಮಾಡಲು ಪ್ರಯತ್ನ ಮಾಡಿದವರು ಎಂದು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ಹಾಗೂ 5 ಮತ್ತು 6ನೇ ಆರೋಪಿ ಪರ ಶ್ರೀ. ಎಂ.ಎಸ್.ಹೆಚ್. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀಮತಿ.ಕೆ.ಸಿ.ಎಂ. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.